ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು 1 ನೇ ಅಧಿಕ ಜೆಎಂಎಫ್‌ಸಿ ನ್ಯಾಯಾಲಯ

ರಾಣೇಬೆನ್ನೂರು.

ಸಿ.ಸಿ.ಸಂಖ್ಯೆ: 610/2024

ಪಿ ಡಬ್ಲ್ಯೂ: 4

ಸಿ ಡಬ್ಲ್ಯೂ: 4

| | | |
|---|---|---|
| ಸಾಕ್ಷಿಯ ಹೆಸರು | : | ಮಲ್ಲಿಕಾರ್ಜುನಯ್ಯ |
| ತಂದೆಯ ಹೆಸರು | : | ಶಿವಾನಂದಯ್ಯ ಹಾಲಸ್ವಾಮಿಮಠ |
| ವಯಸ್ಸು | : | 39 |
| ಉದ್ಯೋಗ | : | ಅಬಕಾರಿ ಮುಖ್ಯ ಪೇದೆ |
| ವಾಸಸ್ಥಳ | : | ರಾಣೇಬೆನ್ನೂರು |

ದಿನಾಂಕ: 08-07-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:**

ದಿನಾಂಕ 27-04-2024 ರಂದು ಚಾ ಸಾ 1 ರವರೊಂದಿಗೆ ರಾಣೇಬೆನ್ನೂರು ಶಹರದಲ್ಲಿ ಗಸ್ತು ಮಾಡುತ್ತಿದ್ದಾಗ ಸುಮಾರು ಸಂಜೆ 05-10 ರ ಸಮಯಕ್ಕೆ ಚಾ ಸಾ 1 ರವರಿಗೆ ರಾಣೇಬೆನ್ನೂರು ಶಹರದಿಂದ ಉಕ್ಕುಂದ ಗ್ರಾಮಕ್ಕೆ ಒಬ್ಬ ವ್ಯಕ್ತಿಯು ಮದ್ಯವನ್ನು ಸಾಗಾಟ ಮಾಡುವ ಕುರಿತು ಮಾಹಿತಿ ಬಂದಿದ್ದು, ರಾಣೇಬೆನ್ನೂರು ಟೆಂಪೋ ನಿಲ್ದಾಣದ ಬಳಿ ಇದ್ದ ಚಾ ಸಾ 2 ಮತ್ತು 3 ರವರನ್ನು ಪಂಚರನ್ನಾಗಿ ಬರಮಾಡಿಕೊಂಡು ಉಕ್ಕುಂದ ಸರ್ಕಲ ಟೆಂಪೋ ನಿಲ್ದಾಣದ ಬಳಿ ಗಸ್ತು ನಿಂತಿದ್ದಾಗ ಸಂಜೆ 05-25 ರ ಸಮಯಕ್ಕೆ ಆರೋಪಿಯು ಒಂದು ಚೀಲದಲ್ಲಿ ಮದ್ಯದ ಟೆಟ್ರಾ ಪ್ಯಾಕೆಟ್ ಗಳನ್ನು ಇಟ್ಟುಕೊಂಡು ಅನುಮಾನಾಸ್ಪದವಾಗಿ ಬರುತ್ತಿದ್ದು, ನಾವು ಆತನನ್ನು ತಡೆದು ವಿಚಾರಿಸಿದಾಗ ಆತನ ಹೆಸರು ಬೀಮಾನಾಯ್ಕ ಎಂದು ತಿಳಿಸಿದನು.

2. ಗುನ್ನಾ ಜಾಗದಲ್ಲಿ ಚೀಲವನ್ನು ಪರಿಶೀಲಿಸಲು ಸ್ಥಳದಲ್ಲಿ ಶೋಧನಾ ಸಮುಚಿತ ಆಧಾರವನ್ನು ವರದಿಯನ್ನು ತಯಾರಿಸಿ ಚಾ ಸಾ 2 ಮತ್ತು 3 ರವರ ಸಮಕ್ಷಮ ವಾಹನವನ್ನು ಮತ್ತು ಚೀಲವನ್ನು ಪರಿಶೀಲಿಸಿದಾಗ ಚೀಲದಲ್ಲಿ 90 ಮಿಲಿಯ 96 ಹೆಚ್.ಸಿ ವಿಸ್ಕಿಯ ಟೆಟ್ರಾ ಪ್ಯಾಕೆಟ್ ಗಳು ಇದ್ದವು. ಅವುಗಳ ಮೇಲಿನ ಭದ್ರತಾ ಚೀಟಿಗಳನ್ನು ಹರಿದು ಹಾಕಲಾಗಿತ್ತು. ಅವುಗಳನ್ನು ಪಂಚರ ಸಮಕ್ಷಮ ಅಮಾನತುಪಡಿಸಿಕೊಳ್ಳಲಾಯಿತು.

3. ದೊರೆತ ಮದ್ಯದಿಂದ 30 ಟೆಟ್ರಾ ಪ್ಯಾಕ್ ಗಳನ್ನು ರಾಸಾಯನಿಕ ವಿಶ್ಲೇಷಣಾ ಪರೀಕ್ಷೆಗಾಗಿ ಮಾದರಿಯಾಗಿ ಪ್ರತ್ಯೇಕಿಸಿ ಒಂದು ಬಿಳಿ ಬಟ್ಟೆಯಲ್ಲಿ ಹಾಕಿ ದಾರದಿಂದ ಹೊಲೆದು ಸೀಲ್ ಮಾಡಿ ಸಂಖ್ಯೆ 661 ರಂತೆ ಇಲಾಖಾ ಮೊಹರು ಮಾಡಲಾಯಿತು. ಸ್ಥಳದಲ್ಲಿ ಮಾದರಿ ಚೀಟಿಗಳನ್ನು ತಯಾರಿಸಿ ಅದಕ್ಕೆ ಅಂಟಿಸಿ ನಾನು ಹಾಗೂ ಸಾಕ್ಷಿದಾರರು ಸಹಿ ಮಾಡಿದೆವು. ಪಂಚನಾಮೆಯನ್ನು ಸಂಜೆ 05-30 ರಿಂದ 06-30 ರವರೆಗೆ ಜರುಗಿಸಿ, ವರದಿಯನ್ನು ನಾನೇ ಬರೆದಿರುತ್ತೇನೆ. ಅದನ್ನು ಓದಿ ಹೇಳಿದ ನಂತರ ಚಾಸಾ 2 ಮತ್ತು 3 ರವರ ಸಹಿ ಪಡೆದುಕೊಂಡು ನಾನು ಮತ್ತು ಚಾಸಾ 1 ರವರು ಸಹಿ ಮಾಡಿರುತ್ತೇವೆ.

4. ಸದರಿ ಜಪ್ತಾದ ಮದ್ಯ ಹಾಗೂ ಆರೋಪಿಯೊಂದಿಗೆ ಠಾಣೆಗೆ ಬಂದು ಸ್ವ ದೂರು ಸಿದ್ದಪಡಿಸಿ ಆರೋಪಿಯ ವಿರುದ್ದ ಪ್ರಕರಣ ದಾಖಲಿಸಿರುತ್ತೇನೆ. ಆರೋಪಿಗೆ ವಿಚಾರಣೆಗೆ ಹಾಜರಾಗಲು ಸಿ ಆರ್ ಪಿ ಸಿ ಕಲಂ 41(ಎ) ರೀತ್ಯ ನೋಟಿಸ್ ನೀಡಲಾಯಿತು. ಈ ಮೇಲಿನ ವಿಷಯಕ್ಕೆ ಕುರಿತು ತನಿಖಾಧಿಕಾರಿಗಳ ಮುಂದೆ ಹೇಳಿಕೆ ಮತ್ತು ಮರುಹೇಳಿಕೆಯನ್ನು ನೀಡಿರುತ್ತೇನೆ.

5. ಸಾಕ್ಷಿಯು ನಿಪಿ 2 ರಲ್ಲಿನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಸಹಿಯನ್ನು **ನಿಪಿ 2 ಬಿ** ಎಂದು ಗುರುತಿಸಲಾಯಿತು. ಸಾಕ್ಷಿದಾರರು ಮಾದರಿ ಮದ್ಯ ಹಾಗೂ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ:**

ಬಾತ್ಮಿ ಬಂದಾಗ ನಾವು ಹಲಗೇರಿ ಕ್ರಾಸ್ ನಿಂದ ಉಕ್ಕುಂದ ಕ್ರಾಸ್ ಗೆ ಸರ್ಕಾರಿ ವಾಹನದಲ್ಲಿ ಒಟ್ಟು ಮೂರು ಜನ ಬರುತ್ತಿದ್ದೆವು. ಬಾತ್ಮಿ ಬಂದ ಸ್ಥಳದಿಂದ ಗುನ್ನಾ ಜಾಗಕ್ಕೆ ಸುಮಾರು 10 ನಿಮಿಷಗಳಲ್ಲಿ ತಲುಪಿರುತ್ತೇವೆ. ಗುನ್ನಾ ಜಾಗ ಜನನಿಬಿಡ ಪ್ರದೇಶ ಎಂದರೆ ಸರಿ. ದಾಳಿಯ ಸಮಯದಲ್ಲಿ ಟೆಂಪೋ ನಿಲ್ದಾಣದಲ್ಲಿ ಸುಮಾರು 40 ವಾಹನಗಳು ಇದ್ದವು ಎಂದರೆಸಾಕ್ಷಿಯು ಸುಮಾರು 8 ವಾಹನಗಳು ಇದ್ದವು ಎಂದು ನುಡಿಯುತ್ತಾರೆ. ಆರೋಪಿಯು ಪಶ್ಚಿಮ ದಿಕ್ಕಿನಿಂದ ಪೂರ್ವ ದಿಕ್ಕಿಗೆ ಬರುತ್ತಿದ್ದನು. ಸದರಿ ಗುನ್ನಾ ಜಾಗವು ರಾಷ್ಟ್ರೀಯ ಹೆದ್ದಾರಿಯಾಗಿರುತ್ತದೆ ಎಂದರೆ ಸಾಕ್ಷಿಯು ರಾಜ್ಯ ಹೆದ್ದಾರಿಗೆ ಕೂಡುವ ಮುಖ್ಯ ರಸ್ತೆಯಾಗಿರುವುದಾಗಿ ನುಡಿಯುತ್ತಾರೆ. ಆ ರೀತಿ ಪಶ್ಚಿಮ ದಿಕ್ಕಿಗೆ ಯಾವುದೇ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ. ಗುನ್ನಾ ಜಾಗದಿಂದ ದರ್ಗಾ ಸ್ಟ್ಯಾಂಡ್ ಸ್ವಲ್ಪ ದೂರದಲ್ಲಿ ಇರುತ್ತದೆ.

ಪಿ ಡಬ್ಲ್ಯೂ: 4

2. ಸದರಿ ದರ್ಗಾ ಆಟೋ ನಿಲ್ದಾಣದ ಉತ್ತರ ಭಾಗಕ್ಕೆ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಸದರಿ ದರ್ಗಾ ಪಶ್ಚಿಮ ದಿಕ್ಕಿಗೆ ಇರುವುದಾಗಿ ನುಡಿಯುತ್ತಾರೆ. ನಾನು ಗುನ್ನಾ ಜಾಗಕ್ಕೆ ಬೇಟಿ ನೀಡದ ಕಾರಣ ಸದರಿ ವಾಸ್ತವ ಸ್ಥಿತಿ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಗುನ್ನಾ ಜಾಗದ ಪಶ್ಚಿಮಕ್ಕೆ ಕಟ್ಟಡಗಳು ಇವೆ ಎಂದರೆ ಸರಿ. ಆರೋಪಿಯನ್ನು ಚಾ ಸಾ 1 ರವರು ಹಿಡಿದು ತಡೆದು ನಿಲ್ಲಿಸಿರುತ್ತಾರೆ. ವಾಹನವನ್ನು ಗುನ್ನಾ ಜಾಗದ ಸಮೀಪ ಟೆಂಪೋ ನಿಲ್ದಾಣದಲ್ಲಿ ನಿಲ್ಲಿಸಿದ್ದೆವು. ಆ ರೀತಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆ ಕಾಲಕ್ಕೆ ಯಾವುದೇ ಪೋಟೋಗಳನ್ನು ತೆಗೆದುಕೊಂಡಿರುವುದಿಲ್ಲ. ನನಗೆ ಮತ್ತು ಈ ಪ್ರಕರಣದ ಕುರಿತು ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಮೇಲಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.